Crl.Misc. 02/2022
PW-01

<u>ದಿನಾಂಕಃ 25-09-2025.</u>

**<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟಿ ಸವಾಲುಃ ಎದುರುದಾರರ ಪರ ಮಾನ್ಯ ಶ್ರೀ SA ವಕೀಲರಿಂದಃ</u>**

ನಾನು ಎದುರುದಾರರನ್ನು ಹೊಡೆ ಬಡೆ ಮಾಡಿ ಮನೆಯಿಂದ ಹೊರ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ಸುಮಾರು 2 ವರ್ಷಗಳಿಂದ ಮೂಡಬುಳ ಗ್ರಾಮದಲ್ಲಿ ವಾಸ ಮಾಡದೇ ಶಹಾಪೂರದಲ್ಲಿ ತಮ್ಮ ಸ್ವಂತ ಅಕ್ಕನ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದು ಹೇಳಿದಕ್ಕೆ ಸಾಕ್ಷಿ ಎದುರುದಾರರು ಶಹಾಪೂರದಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಎದುರುದಾರರ ಜೊತೆಗೆ ಸದರಿ ಮನೆಯಲ್ಲಿ ಅವರ ತಾಯಿಯೂ ಕೂಡಾ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಸುಮಾರು 10 ವರ್ಷಗಳಿಂದ ನಾನು ಮೂಡಬುಳ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ನಾನು ಮೂಡಬುಳ ಗ್ರಾಮದಲ್ಲಿರುವ ಎದುರುದಾರರ ಮನೆತನಕ್ಕೆ ಸಂಬಂಧಿಸಿದ ಸ್ವಂತ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ಎದುರುದಾರರ ಮನೆತನಕ್ಕೆ ಸಂಬಂಧಿಸಿದ ಹೊಲಗಳನ್ನು ನಾನೇ ಲೀಜಿಗೆ ಕೊಟ್ಟು ಮಾಡಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಡಬುಳ ಗ್ರಾಮದಲ್ಲಿರುವ ಸ್ವತ್ತುಗಳಿಗಾದಂತೆ ಎದುರುದಾರರ ಅಕ್ಕ ಶ್ರೀಮತಿ ಸುಜಾತಾ ಇವರು ಮಾನ್ಯ ಕೆಳ ನ್ಯಾಯಾಲಯದಲ್ಲಿ ನನ್ನ ವಿರುದ್ದ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿಯವರು ಎದುರುದಾರರ ಮೇಲೆಯೂ ಕೂಡಾ ದಾವೆಯನ್ನು ಸಲ್ಲಿಸಿರುವುದಾಗಿ ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ಸುಜಾತಾ ಇವರು ಸದರಿ ಮೂಡಬುಳ ಗ್ರಾಮದಲ್ಲಿರುವ ಹೊಲಗಳು ತಮ್ಮ ಪಾಲಿಗೆ ಬಂದಿದ್ದು ಅವುಗಳಲ್ಲಿ ನೀವು ಹಸ್ತಕ್ಷೇಪ ಮಾಡಬಾರದು ಎಂದು ಹೇಳಿ ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಹೇಳಿದ್ದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ.

2. ನಾನು ನಮ್ಮ ಊರಿನಲ್ಲಿರುವ ಕೆಲ ದುಷ್ಟ ವ್ಯಕ್ತಿಗಳ ಮೂಲಕ ಎದುರುದಾರರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಎದುರುದಾರರ ಜೊತೆ ಅನ್ಯೋನ್ಯವಾದ ವೈವಾಹಿಕ ಜೀವನವನ್ನು ಮಾಡಲು ಒಪ್ಪದೇ ಅನಾವಶ್ಯಕವಾಗಿ ಅವರಿಗೆ ಹಿಂಸೆಯನ್ನು ಕೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ದುಷ್ಟ ಶಕ್ತಿಗಳನ್ನು ಕಟ್ಟಿಕೊಂಡು ಎದುರುದಾರರು, ಅವರ ತಾಯಿ ಹಾಗೂ ಅವರ ಅಕ್ಕಂದಿಯರ ಮೇಲೆ ಭಿ-ಗುಡಿ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ದೂರುಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿಯವರು ಹೊಲಕ್ಕಾದಂತೆ ಮೋಸದಿಂದ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುವುದಕ್ಕೆ ಸದರಿ ಕ್ರಿಮಿನಲ್ ದೂರುಗಳನ್ನು ಸಲ್ಲಿಸಿರುವುದಾಗಿ ಹೇಳುತ್ತಾರೆ.

3. ಸದರಿ ಮೂಡಬುಳ ಗ್ರಾಮದಲ್ಲಿರುವ ಸ್ವತ್ತುಗಳಲ್ಲಿ ಎದುರುದಾರರು, ಅವರ ಅಕ್ಕ ಹಾಗೂ ಅವರ ತಾಯಿಗೆ ಮಾತ್ರ ಸಂಪೂರ್ಣವಾದ ಹಕ್ಕು ಮತ್ತು ಭಾದ್ಯತೆ ಇರುತ್ತದೆ ಎಂದು ಹೇಳಿದ್ದಕ್ಕೆ ಸಾಕ್ಷಿ ತಮಗೂ ಹಾಗೂ ತಮ್ಮ ಮಕ್ಕಳಿಗೂ ಕೂಡಾ ಹಕ್ಕು ಮತ್ತು ಭಾದ್ಯತೆ ಇರುವುದಾಗಿ ಹೇಳುತ್ತಾರೆ. ನನ್ನ ಮದುವೆಯು ಎದುರುದಾರರ ಜೊತೆ ಆಗುವ ಮುಂಚಿತವಾಗಿ ನನ್ನ ಮಾವನವರು ಮೂಡಬುಳ ಗ್ರಾಮದಲ್ಲಿರುವ ತಮ್ಮ ಸ್ವತ್ತುಗಳನ್ನು ಅವರ ಮಕ್ಕಳಿಗೆ ಪಾಲು ವಾಟ್ನಿ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸುಜಾತಾ ಇವರಿಗೆ ಸೇರಿದ ಸದರಿ ಹೊಲಗಳನ್ನು ಕಬಳಿಸಲು ಎದುರುದಾರರನ್ನು ಮನೆಯಿಂದ ಹೊರ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ಅರ್ಜಿಯನ್ನು ಸಲ್ಲಿಸಿದ ನಂತರ ಎದುರುದಾರರು ನನ್ನ ಹತ್ತಿರ ಬಂದು ತಮ್ಮ ಅನ್ಯೋನ್ಯವಾದ ವೈವಾಹಿಕ ಜೀವನವನ್ನು ನಡೆಸಲು ಕೇಳಿಕೊಂಡಿದ್ದರೂ ಕೂಡಾ ನಾನು ಅವರ ಮೇಲೆ ದೈಹಿಕವಾಗಿ ಹಲ್ಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರ 2 ರಿಂದ 4 ರವರನ್ನು ಎದುರುದಾರರ ಹತ್ತಿರ ಬಿಡುತ್ತಿಲ್ಲ ಹಾಗೂ ಅವರ ಪ್ರೀತಿಯನ್ನು ನಷ್ಟ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲಿನಿಂದಲೂ ಮೂಡಬುಳ ಗ್ರಾಮದಲ್ಲಿ ಎದುರುದಾರರು ಕೂಲಿ ಕೆಲಸವನ್ನು ಮಾಡಿಕೊಂಡು ನನ್ನ ಹಾಗೂ ಉಳಿದ ಅರ್ಜಿದಾರರನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

4. ಶಹಾಪೂರದಲ್ಲಿ ಎದುರುದಾರರು ಟೇಲರಿಂಗ್ ಕೆಲಸ ಮಾಡಿಕೊಂಡಿರುತ್ತಾರೆ ಎಂದು ನಾನು ನನ್ನ ಅರ್ಜಿಯಲ್ಲಿ ಬರೆಸಿರಬಹುದು. ನಾನು ಮೂಡಬುಳ ಗ್ರಾಮದಲ್ಲಿ ಎದುರುದಾರರು ಜೊತೆ ಜೀವನವನ್ನು ಮಾಡುತ್ತಿದ್ದೆ ಎಂದು ನನ್ನ ಅರ್ಜಿಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಎದುರುದಾರರು ಮೂಡಬುಳ ಗ್ರಾಮದಲ್ಲಿ ಸದರಿ ಕೆಲಸ ಮಾಡುತ್ತಿದ್ದು ನಾನು ಅವರನ್ನು ಮನೆಯಿಂದ ಹೊರ ಹಾಕಿದ ನಂತರ ಅವರು ಈಗ ಯಾವುದೇ ಕೆಲಸವನ್ನು ಮಾಡದೇ ಹಾಗೂ ಅವರಿಗೆ ಯಾವುದೇ ಆದಾಯದ ಮೂಲ ಇರದ ಕಾರಣ ನಮ್ಮನ್ನು ಅವರಿಗೆ ನೋಡಿಕೊಳ್ಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಮೂಡಬುಳ ಗ್ರಾಮದಲ್ಲಿರುವ ಎದುರುದಾರರ ಸ್ವಂತ ಮನೆಯಲ್ಲಿ ವಾಸ ಮಾಡುತ್ತಿದ್ದು ಹಾಗೂ ಅವರಿಗೆ ಸಂಬಂಧಿಸಿದ ಭೂಮಿಗಳನ್ನು ಅಕ್ರಮ ಮಾಡಿಕೊಂಡಿದ್ದರಿಂದ ಎದುರುದಾರರು ಈಗ ಅವರ ಸದರಿ ಅಕ್ಕನ ಆಶ್ರಯದಲ್ಲಿ ಜೀವನ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಈಗಲೂ ಕೂಡಾ ಎದುರುದಾರರು ನನ್ನ ಜೊತೆ ಜೀವನ ಮಾಡಲು ತಯಾರಿದ್ದರೂ ಕೂಡಾ ನಾನು ಅವರಿಗೆ ಪ್ರಾಣ ಬೆದರಿಕೆ ಹಾಕಿದ್ದರಿಂದ ಅವರು ನನ್ನ ಮೇಲೆ ಒಂದು ದೂರನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಎದುರುದಾರರಿಗೆ ಯಾವುದೇ ರೀತಿಯಾದ ದುಷ್ಚಟಗಳು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.